## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಸ್ಪೇಷಲ್ ಕೇಸ್ :475/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪರಮೇಶ್ ಬಿ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಬೆಟ್ಟಯ್ಯ | **23.01.2024** |
| ವಯಸ್ಸು | : | 43 ವರ್ಷ | |
| ವೃತ್ತಿ | : | HC-606, ವಿಜಿಲೆನ್ಸ ವಿಭಾಗ , ಕೆ ಇ ಬಿ | ಪಿ.ಡಬ್ಲೂಃ 4 |
| ವಾಸಸ್ಥಳ | : | ಮೈಸೂರು | ಸಿ.ಡಬ್ಲೂಃ 11 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2020 ರಿಂದ 2021 ರವರೆಗೆ ನಾನು ಸಿಸಿಬಿ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸಿದ್ದೇನೆ.

2. ದಿಃ 02.10.2020 ರಂದು ಚಾಸಾ- 1 ರವರಿಗೆ ಬಾತ್ಮೀದಾರರಿದಿಂದ ಬಿಡಿ ಕಾಲೋನಿಯ ಅಬು- ಅಖಿಲ್ ಅಂಗಡಿಯಲ್ಲಿ ಗಾಂಜಾ ಇದೆ ಎಂದು ಮಾಹಿತಿ ಬಂದಿತ್ತು. ಅದನ್ನು ಫ್ರಾಸಾ 1 ರವರು ಚಾಸಾ- 12, 13,14 ,15 ಹಾಗೂ ನನಗೂ ತಿಳಿಸಿದರು. ಅವರು ನಮ್ಮನ್ನೆಲ್ಲಾ ಕರೆದುಕೊಂಡು ಬೆಳಿಗ್ಗೆ 11.30 ಗಂಟೆಗೆ ನನ್ನ ದ್ವಿಚಕ್ರ ವಾಹನದಲ್ಲಿ ಇಲಾಖಾ ವಾಹನ ಅನುಸರಿಸಿಕೊಂಡು ಹೋದೆ. ಚಾಸಾ- 1 ಹಾಗೂ ಇತರರು ಇಲಾಖಾ ವಾಹನದಲ್ಲಿ ಬಂದರು. ಮಧ್ಯಾಹ್ನ 12 .05 ಗಂಟೆಗೆ ನಾವು ಸ್ಥಳಕ್ಕೆ ತಲುಪಿದೆವು.

4. ನಾವು ಸ್ಥಳಕ್ಕೆ ಹೋದಾಗ ಅಂಗಡಿಯಲ್ಲಿ ಒಬ್ಬ ವ್ಯಕ್ತಿ ಇದ್ದ. ಅವನನ್ನು ಫ್ರಾಸಾ 1 ವಿಚಾರಿಸಿದಾಗ , ತನ್ನ ಹೆಸರು ಅಬ್ದುಲ್ ರಹೀಮ್ ಎಂದು ಹೇಳಿದ. ನಾವು ಹತ್ತಿರ ಹೋಗುತ್ತಿದ್ದಂತೆ ಆ ವ್ಯಕ್ತಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ. ನಾವು ಸುತ್ತುವರೆದು ಅವನನ್ನು ವಶಕ್ಕೆ ಪಡೆದೆವು.

5.ಆರೋಪಿ ವ್ಯಕ್ತಿ ಅಗಂಡಿಯಲ್ಲಿ ಗಾಂಜಾ ಇದೆ ಎಂದು ಹೇಳಿದ. ನಾವು ಒಳಗೆ ಹೋಗಿ ಪರೀಕ್ಷಿಸಲಾಗಿ ಅಂಗಡಿಯ ಸಜ್ಜಾದ ಮೇಲೆ ಒಂದು ಪ್ಲಾಸ್ಟಿಕ್ ಕವರ್ ಇತ್ತು. ಅದನ್ನು ಪರಿಶೀಲಿಸಿದಾಗ ಅದರಲ್ಲಿ ಗಾಂಜಾ ಇದ್ದದ್ದು ಕಂಡು ಬಂತು. ಅದನ್ನು ಫ್ರಾಸಾ 1 ಜಪ್ತು ಮಾಡಿಕೊಂಡರು. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಸಾಕ್ಷಿ ಗುರುತಿಸುತ್ತಾರೆ. 1 ನೇ ಆರೋಪಿಯ ಅಂಗಶೋಧನೆ ಮಾಡಿದಾಗ ಜೇಬಿನಲ್ಲಿ ರೂ.2,200/- ಇತ್ತು. ಅವು 500 ರೂ. 3 ನೋಟುಗಳು 200 ರೂ. ಮುಖಬೆಲೆಯ 2 ನೋಟುಗಳು , 100 ರೂ. ಮುಖಬೆಲೆಯ 3 ನೋಟುಗಳು ಇದ್ದವು. 1 ನೇ ಆರೋಪಿಗೆ ಗಾಂಜಾದ ಬಗ್ಗೆ ವಿಚಾರಿಸಲಾಗಿ 2 ಮತ್ತು 3 ನೇ ಆರೋಪಿತರಿಂದ ಗಾಂಜಾ ಪಡೆದುಕೊಂಡಿದ್ದಾಗಿ ತಿಳಿಸಿದ.

6.ಅಂಗಡಿಯಲ್ಲಿ ಗಾಂಜಾವನ್ನು ತೂಕ ಮಾಡಿದಾಗ ಅದು 1 ಕೆಜಿ 983 ಗ್ರಾಂ ಇತ್ತು. ತೂಕದ ಯಂತ್ರವನ್ನು ತರೆಸಿಕೊಂಡು ತೂಕ ಮಾಡಲಾಗಿತ್ತು . ಅಲ್ಲಿಂದ 1 ನೇ ಆರೋಪಿ ನಮ್ಮನ್ನು ರಾಜೀವನಗರದ , 1 ನೇ ಹಂತದಲ್ಲಿರುವ 2 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋದ. ಒಳಗೆ ಹೋದಾಗ 1 ನೇ ಆರೋಪಿ, ಅಲ್ಲಿದ್ದಂತಹ ಇಬ್ಬರು ವ್ಯಕ್ತಿಗಳನ್ನು 2 ಮತ್ತು 3 ನೇ ಆರೋಪಿತರು ಎಂದು ಹೇಳಿದ. ಅವರು ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರಾಗಿದ್ದಾರೆ. ಫ್ರಾಸಾ 1 ರವರು 2 ಮತ್ತು 3 ನೇ ಆರೋಪಿತರನ್ನು ವಿಚಾರಿಸಿದಾಗ ಅವರು 1 ನೇ ಆರೋಪಿಗೆ ಗಾಂಜಾ ಕೊಟ್ಟದ್ದು ನಿಜ ಎಂದು ಹೇಳಿ ಮನೆಯಲ್ಲಿ 3 ಕೆಜಿ 105 ಗ್ರಾಂ ಗಾಂಜಾ ಕೋಣೆಯ ಸಜ್ಜಾದ ಮೇಲೆ ಜುವಾರಿ ಸಿಮೆಂಟ್‌ನ ಪ್ಲಾಸ್ಟಿಕ್ ಚೀಲದಲ್ಲಿ ಇತ್ತು. ಮು. ಮಾ. 1 ಆ ದಿನ ಗಾಂಜಾ ಇದ್ದ ಚೀಲವಾಗಿದೆ.

7. ಫ್ರಾಸಾ 2 ಮತ್ತು 3 ರವರನ್ನು ರಾಜೀವನಗರದ ಸ್ಥಳಕ್ಕೆ ಕರೆಸಿಕೊಂಡು ಅವರ

ಸಮಕ್ಷಮ ಪಂಚನಾಮೆ ಮಾಡಿದರು. ಆರೋಪಿತರೊಂದಿಗೆ ಜಫ್ತಾದ ವಸ್ತುಗಳೊಂದಿಗೆ ಮರಳಿ ಠಾಣೆಗೆ ಬಂದೆವು.

8. ಎರಡೂ ಸ್ಥಳಗಳಲ್ಲಿ ಜಫ್ತಾದ ಗಾಂಜಾವನ್ನು ಒಂದೇ ಕಡೆ ಒಟ್ಟಾಗಿ ಪ್ಯಾಕ ಮಾಡಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ ಪಂಚರು ಹಾಗೂ ಇತರರು ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು. ಮಧ್ಯಾಹ್ಣ 12.15 ರಿಂದ 1.45 ಗಂಟೆಯವರೆಗೆ ಅಂಗಡಿಯಲ್ಲಿ ಮಧ್ಯಾಹ್ಣ 12.15 ರಿಂದ 4 ಗಂಟೆಗೆಯವರೆಗೆ ರಾಜೀವನಗರದ ಮನೆಯಲ್ಲಿ ಪಂಚನಾಮೆ ತಯಾರಿಸಲಾಯಿತು. ನಿಪಿ. 2 ರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು. ಚಾಸಾ- 15 ರವರು ಠಾಣೆಯಿಂದಲೇ ತೆಗೆದುಕೊಂಡು ಬಂದಂತಹ ಲ್ಯಾಪಟಾಪ್ ನಲ್ಲಿ ಪಂಚನಾಮೆಯನ್ನು ಬೆರಳಚ್ಚು ಮಾಡಲಾಯಿತು. ನಿಪಿ. 2 ನ್ನು ಸ್ಥಳದಲ್ಲಿಯೇ ಪ್ರಿಂಟ್ ತೆಗೆದು ಸಹಿ ಪಡೆಯಲಾಯಿತು.

9. ದಾಳಿಗೂ ಪೂರ್ವದಲ್ಲಿ ನಾವೆಲ್ಲರೂ ಪರಸ್ಪರ ಅಂಗಶೋಧನೆ ಮಾಡಿಕೊಂಡಿದ್ದೇವು. ಆ ಬಗ್ಗೆ ತನಿಖಾಧಿಕಾರಿಯ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ 1 ನೇ ಆರೋಪಿತರ ಪರ ಶ್ರೀ ಬಿಪಿಡಿ ರವರಿಂದಃ**

10. ಆ ದಿನ ಸೀಲ್ ಮಾಡಲು ಉಪಯೋಗಿಸಿದ ಸೀಲ್ ಠಾಣೆಯಲ್ಲಿದೆ. ಸೀಲನ್ನು ಯಾವಾಗ ಬೇಕಾದಾಗ ಉಪಯೋಗಿಸಿ ಮತ್ತೆ ಠಾಣೆಯಲ್ಲಿಯೇ ಇಡುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ಠಾಣೆಯಿಂದ ಒಟ್ಟು 6 ಜನ ಬಿಟ್ಟಿದ್ದೇವು. ಒಂದು ಜೀಪ್ ಹಾಗೂ 3 ದ್ವೀಚಕ್ರ ವಾಹನದಲ್ಲಿ ನಾವು ಆ ದಿನ ಸ್ಥಳಕ್ಕೆ ಹೋದೆವು. ನನ್ನ ದ್ವೀಚಕ್ರ ವಾಹನದಲ್ಲಿ ಚಾಸಾ- 14 ಇದ್ದ. ಚಾಸಾ- 12 ಮತ್ತು 13 ಇನ್ನೊಂದು ವಾಹದಲ್ಲಿ ಇದ್ದು, ಚಾಸಾ- 13 ರವರು

ಅದನ್ನು ಓಡಿಸುತ್ತಿದ್ದ , ಚಾಸಾ– 15 ಒಬ್ಬನೇ ಇನ್ನೊಂದು ದ್ವಿಚಕ್ರ ವಾಹನದಲ್ಲಿ ಬಂದಿದ್ದ . ಇಲಾಖಾ ವಾಹನದಲ್ಲಿ ಚಾಸಾ– 1 ಮತ್ತು ಚಾಲಕ ಮಾತ್ರ ಇದ್ದರು . ಚಾಲಕನ ಹೆಸರು ನೆನಪಿಲ್ಲ. ದ್ವಿಚಕ್ರ ವಾಹನಗಳ ನಂಬರ್ ಗಳನ್ನು ನೆನಪಿನಿಂದ ಹೇಳಲು ಆಗುವುದಿಲ್ಲ.

11. ಸಿಸಿಬಿ ಠಾಣಾ ಡೈರಿಯಲ್ಲಿ ನಾವು ದಾಳಿಗೆ ಹೋಗುವ ಪೂರ್ವದಲ್ಲಿ ಎಲ್ಲಿಗೆ ಹೋಗುತ್ತಿದ್ದೇವೆ ಎಂದು ನಮೂದಿಸುವ ರೂಡಿ ಇಲ್ಲ , ಡೈರಿಯನ್ನು ಇಟ್ಟಿಲ್ಲ. 1 ನೇ ಆರೋಪಿಯ ಅಂಗಡಿಗೆ ಹೋದಾಗ ಅಲ್ಲಿ ಯಾವುದೇ ಬರವಣಿಗೆ ಆಗಿಲ್ಲ. 2 ಮತ್ತು 3 ನೇ ಆರೋಪಿತರು ದೊರೆತ ಮನೆಯಲ್ಲಿ ಯಾವುದೇ ಬರವಣಿಗೆಯಾಗಿಲ್ಲ. ನನ್ನ ಅಂಗಶೋಧನೆಯನ್ನು ಚಾಸಾ– 14 ಮಾಡಿದ , ಅದನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಅದೇ ದಿನ ತನಿಖಾಧಿಕಾರಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ನನ್ನ ಹೇಳಿಕೆ ಪಡೆದುಕೊಂಡ ನಂತರ ಈ ವರೆಗೂ ಪುನಃ ತನಿಖಾಧಿಕಾರಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿಚಾರಿಸಿಲ್ಲ. ನಾವು ದಾಳಿಯಿಂದ ಮರಳಿ ಬಂದ ನಂತರ ಅದೇ ದಿನ ತನಿಖಾಧಿಕಾರಿ ನನ್ನ ಸಮಕ್ಷಮ ಬೇರೆ ಸಿಬ್ಬಂದಿಗಳನ್ನು ವಿಚಾರಿಸಿ ಹೇಳಿಕೆ ಪಡೆದಿದ್ದಾರೆ. ಆ ದಿನ ನಾವು ದಾಳಿ ಮಾಡಿದ ಅಂಗಡಿ ಕಾಂಕ್ರೀಟ್ ಕಟ್ಟಡವಾಗಿದ್ದು ವಿಸ್ತೀರ್ಣ 8*8 ಇರಬಹುದು . ಅಂಗಡಿಯ ಅಕ್ಕಪಕ್ಕ ಬೇರೆ ಅಂಗಡಿಗಳು ಇರಲಿಲ್ಲ . ನಾವು ದಾಳಿ ಮಾಡಿದ ಅಂಗಡಿಯ ಮೇಲೆ ವಾಸದ ಮನೆಗಳು ಇದ್ದವು. ಅಕ್ಕಪಕ್ಕ ಬೇರೆ ಮನೆಗಳು ಇದ್ದವು. ನಾವು ಸ್ಥಳಕ್ಕೆ ಹೋದಾಗ ಅಕ್ಕಪಕ್ಕದ ಸಾರ್ವಜನಿಕರು ಸೇರಿದ್ದರು. ಪಂಚನಾಮೆ ಟೈಪ್ ಮಾಡಲು ಪ್ರಾರಂಭಿಸಿದ್ದರಿಂದ ಮುಗಿಯುವರೆಗೂ ನಾನು ಅವರೊಂದಿಗೆ ಇದ್ದೆ. ಅಂಗಡಿಯಲ್ಲಿ ವಿದ್ಯುತ್ ಸರಬರಾಜು ಇತ್ತು. ಅಂಗಡಿಯಲ್ಲಿ ಖಲೀಲ್ ಖಾನ್ ಇದ್ದು ಅದು ತನಗೆ ಸೇರಿದ ಅಂಗಡಿ ಹಾಗೂ ಕಟ್ಟಡ ಎಂದು ಹೇಳಿದ. ಆ ಮಳಿಗೆ ಖಲೀಲ್ ಖಾನ್‌ಗೆ ಸೇರಿದ್ದು ಎನ್ನುವುದಕ್ಕೆ ಫ್ರಾಸಾ 1 ರವರು

ವಿಚಾರಿಸಿದಾಗ 1 ನೇ ಆರೋಪಿ ದಾಖಲೆ ಕೊಟ್ಟಿದ್ದಾರೆ. ಆ ದಾಖಲೆ ಯಾವುದೇ ಎಂದು ನಾನು ಗಮನಿಸಿಲ್ಲ. 1 ನೇ ಆರೋಪಿ ಹಾಗೂ ಕಟ್ಟಡ ಮಾಲೀಕರಿಗೆ ಯಾವುದೇ ಸಂಬಂಧ ಇಲ್ಲ , ಕೇವಲ ಮಾಲೀಕ ಹಾಗೂ ಬಾಡಿಗೆದಾರರು. 1 ನೇ ಆರೋಪಿ ಅಲ್ಲಿ ಬಾಡಿಗೆದಾರ ಎನ್ನುವ ಬಗ್ಗೆ ದಾಖಲೆಯನ್ನು ಕೇಳಿ ಪಡೆದರೋ ಇಲ್ಲವೋ ನನಗೆ ಗೊತ್ತಿಲ್ಲ. ಅಂಗಡಿಯಲ್ಲಿ ನಾವು ಕರೆದುಕೊಂಡ ಹೋದಂತಹ ಪಂಚರು ಇದ್ದರು , ಆದರೆ ಸ್ಥಳೀಕರನ್ನು ಪಂಚರಾಗಿ ಕರೆದಿಲ್ಲ .

12. ಚಾಸಾ– 14 ಉಪಯೋಗಿಸಿದ ಲ್ಯಾಪಟಾಪ್ ಯಾವ ಕಂಪನಿಯದ್ದು ಎಂದು ನನಗೆ ನೆನಪಿಲ್ಲ. ಯಾರು ವಿಡಿಯೋ ಮಾಡಿದರು ಎಂದು ನನಗೆ ನೆನಪಿಲ್ಲ. ಅಂಗಡಿಯಲ್ಲಿ ಗಾಂಜಾ ಎಲೆ , ಹೂವು ,ಬೀಜ, ಕಾಂಡವನ್ನು ಪ್ರತ್ಯೇಕಿಸಿ ತೂಕ ಮಾಡಿಲ್ಲ , ಒಟ್ಟಾಗಿ ತೂಕ ಮಾಡಲಾಗಿದೆ. ಪ್ಲಾಸ್ಟಿಕ್ ಚೀಲವನ್ನು ಪ್ರತ್ಯೇಕವಾಗಿ ತೂಕ ಮಾಡಿಲ್ಲ. ನಾನು ಸೀಲ್ ಮಾಡಿದ ಜಪ್ತಾದ ವಸ್ತುವಿಗೆ ಹಚ್ಚಿದ ಚೀಟಿಗೆ ಸಹಿ ಮಾಡಿದ್ದಿನೋ ಇಲ್ಲವೋ ನನಗೆ ನೆನಪಿಲ್ಲ. ಫ್ರಾಸಾ 1 ಅದಕ್ಕೆ ಸಹಿ ಮಾಡಿದ್ದಾರೆ. ಪಂಚನಾಮೆಯಲ್ಲಿ ನೋಟುಗಳ ನಂಬರ್ ಗಳನ್ನು ನಮೂದಿಸಿಲ್ಲ.

13.ರಾಜೀವನರದ ಮನೆಗೆ ಹೋದಾಗ ಆ ಮನೆ 2 ನೇ ಆರೋಪಿಗೆ ಸೇರಿದ್ದು ಎಂದು ವಿಚಾರಿಸಿದಾಗ ಗೊತ್ತಾಯಿತು. ಅಲ್ಲಿ ಪಂಚನಾಮೆಯನ್ನು ಮೊದಲನೇ ಮಹಡಿಯಲ್ಲಿ ಮಾಡಲಾಯಿತು. 1 ನೇ ಮಹಡಿಯ ಹಾಲ್ 20*30 ಇರಬಹುದು. ಮನೆ ವಿಸ್ತೀರ್ಣ ನಿಖರವಾಗಿ ಹೇಳಲು ಆಗುವುದಿಲ್ಲ. ಆ ದಿನ ಜಪ್ತು ಮಾಡಿಕೊಂಡಿದ್ದು ಎನ್ನುವ ಬಗ್ಗೆ ಮು. ಮಾ. 1 ಕ್ಕೆ ವಿಶೇಷ ಗುರುತು ಮಾಡಿಲ್ಲ . ಮು. ಮಾ. 1 ರಂತಹ ಚೀಲಗಳು ಅಂಗಡಿಯಲ್ಲಿ ಸಿಗುತ್ತವೆ ಎಂದರೆ ನಿಜ. ಮನೆಯಲ್ಲಿ ಪ್ರತ್ಯೇಕವಾಗಿ ಹೂವು, ಕಾಂಡ , ಬೀಜವನ್ನು ತೂಕ ಮಾಡಿಲ್ಲ ಒಟ್ಟಾಗಿ ತೂಕ ಮಾಡಿದೆವು. ಜಫ್ತಾದ ವಸ್ತುಗಳ ಮೇಲೆ ಹಚ್ಚಿದ ಚೀಟಿಗೆ ಯಾರು ಸಹಿ

ಮಾಡಿದ್ದಾರೆ ಎಂದು ನೆನಪಿಲ್ಲ. ನಾನು ಆ ದಿನ ಸ್ಥಳಕ್ಕೆ ಹೋಗಿಯೇ ಇಲ್ಲ ತನಿಖಾಧಿಕಾರಿಯ ಮಾತು ಕೇಳಿ ಕೇಸಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ 1 ನೇ ಆರೋಪಿಯ ಯಾವುದೇ ಅಂಗಡಿ ಇಲ್ಲ , ಅವನ ಅಂಗಡಿಯಿಂದ ಯಾವುದೇ ವಸ್ತುವನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಜಪ್ತು ಮಾಡಿಕೊಂಡಿದ್ದೇವೆ ಎನ್ನುವ ವಸ್ತುವಿಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯ ಮನೆಗೆ ಹೋಗಿಲ್ಲ ಅಲ್ಲಿ ಯಾವುದೇ ವಸ್ತು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಜಪ್ತು ಮಾಡಿಕೊಂಡಿದ್ದೇವೆ ಎನ್ನುವ ವಸ್ತುವಿಗೂ 2 ಮತ್ತು 3 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ಮತ್ತು 3 ನೇ ಆರೋಪಿತರ ಪರವಾಗಿಃ ಮೇಲಿನ ಪಾಟೀಸವಾಲನ್ನು ತಮ್ಮದಾಗಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

23.01.2024.
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.